ಕರ್ನಾಟಕ ಸರ್ಕಾರ

ಉರ್ದು ಮತ್ತು ಇತರೆ ಅಲ್ಪ ಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ, ಶಾಲಾ ಶಿಕ್ಷಣ ಇಲಾಖೆ,
ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-560001

ಸಂಖ್ಯೆ:ಎಂ.ಸಿ-4/ಪ್ರ.ಕಾ.ಸ್ಪ/05/2023-24 ದಿನಾಂಕ: 19-06-2023

## ಸುತ್ತೋಲೆ

ವಿಷಯ: 2023-24 ನೇ ಸಾಲಿನ ಪ್ರತಿಭಾಕಾರಂಜಿ/ಕಲೋತ್ಸವ ಕಾರ್ಯಕ್ರಮ ಅನುಷ್ಠಾನಗೊಳಿಸುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ: ಇಪಿ 49 ಯೋಯೋಕ 2023. ದಿನಾಂಕ:20-04-2023
2. ಸರ್ಕಾರದ ಆದೇಶ ಸಂಖ್ಯೆ: ಇಪಿ 51 ಯೋಯೋಕ 2023. ದಿನಾಂಕ:28-04-2023
3. ಈ ಕಛೇರಿಯ ಜ್ಞಾಪನಾ ಸಂಖ್ಯೆ:ಯೋ(1)/ಮು.ಯೋ.ಕಾ.02/2023(1072554) ದಿನಾಂಕ:29.04.2023

********

ಪ್ರತಿಭಾ ಕಾರಂಜಿ ಸ್ಪರ್ಧೆಯನ್ನು 2002ನೇ ಸಾಲಿನಿಂದ ಹಮ್ಮಿಕೊಳ್ಳಲಾಗುತ್ತಿದ್ದು, ಈ ಕಾರ್ಯಕ್ರಮವು ಶಿಕ್ಷಣ ಕ್ಷೇತ್ರದಲ್ಲಿ ಕಲೆಗಳನ್ನು ಉತ್ತೇಜಿಸುವ ಮೂಲಕ ಶಾಲಾ ವಿದ್ಯಾರ್ಥಿಗಳ ಕಲಾತ್ಮಕ ಪ್ರತಿಭೆಯನ್ನು , ಸೃಜನಾತ್ಮಕ ಕೌಶಲ್ಯಗಳನ್ನು ಹೊರತರಲು ಉತ್ತಮ ವೇದಿಕೆಯಾಗಿದೆ.

ಉಲ್ಲೇಖಿತ ಆದೇಶ/ಪತ್ರಗಳಂತೆ 2023-24ನೇ ಸಾಲಿನಲ್ಲಿ ರಾಜ್ಯವಲಯದ ಮುಂದುವರೆದ ಯೋಜನಾ ಕಾರ್ಯಕ್ರಮದಡಿಯಲ್ಲಿ ಸರ್ಕಾರಿ, ಅನುದಾನಿತ ಹಾಗೂ ಅನುದಾನ ರಹಿತ ಶಾಲಾಮಕ್ಕಳಿಗೆ (1 ರಿಂದ 10ನೇ ತರಗತಿ) ಏಕ ರೀತಿಯ ಸಾಂಸ್ಕೃತಿಕ, ಶೈಕ್ಷಣಿಕ ಸ್ಪರ್ಧೆಗಳನ್ನು ಮತ್ತು 08 ರಿಂದ 12 ನೇ ತರಗತಿಯ ವಿದ್ಯಾರ್ಥಿಗಳಿಗೆ, ಕಲೋತ್ಸವ ಸ್ಪರ್ಧೆಗಳನ್ನು ಆಯೋಜಿಸಲು ತೀರ್ಮಾನಿಸ ಲಾಗಿದೆ. ಸ್ಪರ್ಧೆಗಳನ್ನು ನಡೆಸುವ ವಿಧಾನ ಕುರಿತಂತೆ ಲಗತ್ತಿಸಿರುವ ಅನುಬಂಧ-1 ,2 ,3 ಹಾಗೂ 4 ರಲ್ಲಿ ವಿವರಿಸಲಾಗಿದ್ದು, ಅದರಂತೆ ಶಿಕ್ಷಣ ಇಲಾಖೆಯ ಉಪನಿರ್ದೇಶಕರು (ಆಡಳಿತ) ಮತ್ತು (ಅಭಿವೃದ್ಧಿ), ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಎಲ್ಲಾ ಹಂತದ ಅಧಿಕಾರಿಗಳು ಸಮುದಾಯದ ಸಹಕಾರದೊಂದಿಗೆ ಸ್ಥಳೀಯ ಹಬ್ಬದ ರೀತಿಯಲ್ಲಿ ಉತ್ತಮವಾಗಿ ಆಯೋಜಿಸಲು ಸೂಚಿಸಿದೆ.

**ಸ್ಪರ್ಧೆಗಳ ಆಯೋಜನೆ ಮತ್ತು ಸ್ಪರ್ಧಾ ನಿಯಮಗಳು:**

ಇದು ಮಹತ್ವದ ಕಾರ್ಯಕ್ರಮವಾಗಿದ್ದು, ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಪೂರಕ ವಾಗಿರುವುದರಿಂದ ಶಾಲಾ ಹಂತದಲ್ಲಿ ಹೆಚ್ಚು ಮಕ್ಕಳು ಪಾಲ್ಗೊಳ್ಳುವಂತೆ ಪ್ರೋತ್ಸಾಹಿಸಬೇಕು.

- 1 ರಿಂದ 7 ನೇ ತರಗತಿವರೆಗಿನ ವಿದ್ಯಾರ್ಥಿಗಳು ವೈಯಕ್ತಿಕ ವಿಭಾಗದಲ್ಲಿ ಯಾವುದಾದರೂ 2 ವಿಷಯಗಳಲ್ಲಿ ಮಾತ್ರ ಮತ್ತು ಸಾಮೂಹಿಕ ವಿಭಾಗದಲ್ಲಿ ಯಾವುದಾದರೂ 1 ವಿಷಯದಲ್ಲಿ ಮಾತ್ರ ಭಾಗವಹಿಸಲು ಅವಕಾಶವಿದೆ. ಪ್ರೌಢಶಾಲಾ ವಿದ್ಯಾರ್ಥಿಗಳು ವೈಯಕ್ತಿಕ ವಿಭಾಗದಲ್ಲಿ ಯಾವುದಾದರೂ 1 ವಿಷಯದಲ್ಲಿ ಮಾತ್ರ ಭಾಗವಹಿಸಲು ಅವಕಾಶವಿದೆ.
- ಯಾವುದೇ ವೈಯಕ್ತಿಕ ಹಾಗೂ ಸಾಮೂಹಿಕ ವಿಭಾಗದ ಸ್ಪರ್ಧಾ ವಿಷಯದಲ್ಲಿ ಕನಿಷ್ಠ 5 ವಿದ್ಯಾರ್ಥಿಗಳು/ 5 ಗುಂಪುಗಳು ಭಾಗವಹಿಸಬೇಕು. ಭಾಷಾ ಅಲ್ಪ ಸಂಖ್ಯಾತ ಸ್ಪರ್ಧೆಗಳಲ್ಲಿ ಕನಿಷ್ಠ 3 ವಿದ್ಯಾರ್ಥಿಗಳು ಭಾಗವಹಿಸಬೇಕು. ಇಲ್ಲವಾದಲ್ಲಿ ಅಂತಹ ಸ್ಪರ್ಧೆಗಳನ್ನು ರದ್ದುಪಡಿಸಿ, ಬಹುಮಾನದ ಹಾಗೂ ತೀರ್ಪುಗಾರರ ಮೊತ್ತವನ್ನು ಸರ್ಕಾರದ ಲೆಕ್ಕ ಶೀರ್ಷಿಕೆಗೆ ಜಮಾ ಮಾಡುವುದು. ಇದು ಎಲ್ಲಾ ಹಂತದ /ವಿಭಾಗಗಳ ಸ್ಪರ್ಧೆಗಳಿಗೂ ಅನ್ವಯಿಸುತ್ತದೆ.
- ಚಿತ್ರಕಲಾ ಸ್ಪರ್ಧೆಗೆ ಸಂಬಂಧಿಸಿದಂತೆ ಬಣ್ಣ, ಬ್ರಷ್ ಇತ್ಯಾದಿಗಳನ್ನು ಸ್ಪರ್ಧಾಳುಗಳೇ ತರಬೇಕು. ಆದರೆ,ಸಂಘಟಕರು ಕಡ್ಡಾಯವಾಗಿ ಸ್ಪರ್ಧಿಗಳಿಗೆ ಒಂದೇ ಅಳತೆಯ ಡ್ರಾಯಿಂಗ್ ಶೀಟ್ ನೀಡುವುದು.
- ಜಾನಪದ ನೃತ್ಯ, ಕೋಲಾಟ ಇವುಗಳಿಗೆ ಉಡುಪು, ವರ್ಣಾಲಂಕಾರ, ಪಕ್ಕವಾದ್ಯ, ಹಾಡುಗಾರಿಕೆ ಇವುಗಳನ್ನು ಸ್ಪರ್ಧಾರ್ಥಿಗಳೇ ಒದಗಿಸಿಕೊಳ್ಳಬೇಕು.
- ಲಘು ಸಂಗೀತ ಸ್ಪರ್ಧೆಗೆ ಕನ್ನಡ ಕವಿಗಳಿಂದ ರಚಿಸಲ್ಪಟ್ಟ ಗೀತೆಗಳನ್ನು ಮಾತ್ರ ಹಾಡಬೇಕು.
- ಕ್ಲೇ ಮಾಡಲಿಂಗ್ ಗೆ ಜೇಡಿ ಮಣ್ಣನ್ನು ಸ್ಪರ್ಧಾ ಸಮಿತಿ ಒದಗಿಸಬೇಕು,
- ರಂಗೋಲಿ ಸ್ಪರ್ಧೆಗೆ ವಸ್ತುಗಳನ್ನು ಸ್ಪರ್ಧಾಳುಗಳೇ ತರಬೇಕು.
- ಸ್ಪರ್ಧೆಗಳ ದಿನಾಂಕ ಮತ್ತು ಇನ್ನಿತರ ವಿವರಗಳನ್ನು ನಿಗಧಿ ಪಡಿಸಿರುವಂತೆ ಎಲ್ಲಾ ಶಾಲೆಗಳಿಗೂ ಸಾಕಷ್ಟು ಮುಂಚಿತವಾಗಿ ಸುತ್ತೋಲೆಗಳನ್ನು ಕಳುಹಿಸಿ, ಅರ್ಹ ವಿದ್ಯಾರ್ಥಿಗಳು ಈ ಅವಕಾಶದಿಂದ ವಂಚಿತರಾಗದಂತೆ ಎಚ್ಚರ ವಹಿಸಬೇಕು.

[signature] /20/6

- ಸ್ಪರ್ಧೆಗಳನ್ನು ನಡೆಸಿದ ಕೂಡಲೇ ಮುಂದಿನ ಹಂತದ ಸ್ಪರ್ಧೆಗೆ ಸಹಾಯವಾಗುವಂತೆ ನಿಗಧಿಪಡಿಸಿದ ದಿನಾಂಕದೊಳಗೆ ವಿಜೇತರ ಪಟ್ಟಿಯನ್ನು ತಕ್ಷಣವೇ ಕ್ರೋಢೀಕರಿಸಿ ಸಂಬಂಧಿಸಿದವರಿಗೆ ಕಳುಹಿಸಬೇಕು.
- ಸಂಗೀತ ಸ್ಪರ್ಧೆಗಳಿಗೆ ಸಂಬಂಧಿಸಿದಂತೆ ಶೃತಿ ವಾದ್ಯವನ್ನು ಹೊರತುಪಡಿಸಿ, ಯಾವುದೇ ವಾದ್ಯ ಗಳನ್ನು ಬಳಸಲು ಅವಕಾಶವಿಲ್ಲ. ಶಾಸ್ತ್ರೀಯ ಸಂಗೀತದಲ್ಲಿ ತಾಳವನ್ನು ಕೈಯಿಂದ ಹಾಕಬೇಕು.
- ಜಾನಪದ ನೃತ್ಯದಲ್ಲಿ ಜಾನಪದ ಶೈಲಿಯ ನೃತ್ಯವನ್ನೇ ಪ್ರದರ್ಶಿಸಬೇಕು. ಸಂಗೀತ, ನೃತ್ಯ, ಮತ್ತು ದೃಶ್ಯಕಲೆ ಈ ಸ್ಪರ್ಧೆಗಳಲ್ಲಿ ರಾಜ್ಯದ ಬುಡಕಟ್ಟು, ಜಾನಪದ ಮತ್ತು ಪಾರಂಪರಿಕ ಕಲಾ ಪ್ರಕಾರಗಳನ್ನು ಒಳಗೊಂಡಂತೆ ಪ್ರದರ್ಶಿಸಬೇಕು. ಉದಾ: ನಂದಿಕೋಲು ಕುಣಿತ, ಪೂಜಾ ಕುಣಿತ, ಡೊಳ್ಳು ಕುಣಿತ, ಗಾಂಜೀಪಾ ಕಲೆ, ಯಕ್ಷಗಾನ ಕಲೆ, ಗೊರವರ ಕುಣಿತ, ಐತಿಹಾಸಿಕ ನಾಟಕ, ವೀರಗಾಸೆ, ಬಯಲಾಟ, ಭೂತದ ಕೋಲು ಮುಂತಾದವುಗಳನ್ನು ಆಯ್ಕೆ ಮಾಡಿಕೊಳ್ಳತಕ್ಕದ್ದು.
- ವೈಯಕ್ತಿಕ ಹಾಗೂ ಸಾಮೂಹಿಕ ಸ್ಪರ್ಧೆಗಳಲ್ಲಿ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿ/ತಂಡವನ್ನು ಮುಂದಿನ ಸ್ಪರ್ಧೆಗೆ ಆಯ್ಕೆ ಮಾಡುವುದು. ಮೇಲಿನ ಎಲ್ಲಾ ನಿಯಮಗಳು ತಾಲ್ಲೂಕು ಮಟ್ಟದಿಂದ ಜಿಲ್ಲಾ ಮಟ್ಟದವರೆಗೆ ಹಾಗೂ 3 ವಿಭಾಗಗಳಿಗೂ ಅನ್ವಯಿಸುತ್ತದೆ.

## 1 ರಿಂದ 4 ನೇತರಗತಿ: ವೈಯುಕ್ತಿಕ ಸ್ಪರ್ಧೆಗಳು-20

| ಕ್ರ.ಸಂ | ವೈಯಕ್ತಿಕ -ಸ್ಪರ್ಧೆಗಳವಿವರ | ಸ್ಪರ್ಧೆಗಳ ಸಂಖ್ಯೆ | ವಿಜೇತರಸಂಖ್ಯೆ (ಪ್ರಥಮ-1, ದ್ವಿತೀಯ-1,ತೃತೀಯ-1) |
|---|---|---|---|
| 1 | **ಕಂಠಪಾಠ:** ಕನ್ನಡ,ಇಂಗ್ಲೀಷ್, ಹಿಂದಿ, ಸಂಸ್ಕೃತ, ಉರ್ದು, ಮರಾಠಿ, ತೆಲುಗು, ತಮಿಳು, ತುಳು, ಕೊಂಕಣಿ | 10 | 30 |
| 2 | ಧಾರ್ಮಿಕ ಪಠಣ(ಸಂಸ್ಕೃತ,ಅರೇಬಿಕ್) | 02 | 06 |
| 3 | ಲಘು ಸಂಗೀತ | 01 | 03 |
| 4 | ಛದ್ಮ ವೇಷ | 01 | 03 |
| 5 | ಕಥೆ ಹೇಳುವುದು | 01 | 03 |
| 6 | ಚಿತ್ರಕಲೆ | 01 | 03 |
| 7 | ಅಭಿನಯ ಗೀತೆ | 01 | 03 |
| 8 | ಕ್ಲೇ ಮಾಡಲಿಂಗ್ | 01 | 03 |
| 9 | ಭಕ್ತಿ ಗೀತೆ | 01 | 03 |
| 10 | ಆಶು ಭಾಷಣ | 01 | 03 |
| | **ಒಟ್ಟು** | **20** | **60** |

## 5 ರಿಂದ 7ನೇ ತರಗತಿ: ವೈಯುಕ್ತಿಕ ಸ್ಪರ್ಧೆಗಳು-22

| ಕ್ರ.ಸಂ | ವೈಯಕ್ತಿಕ -ಸ್ಪರ್ಧೆಗಳವಿವರ | ಸ್ಪರ್ಧೆಗಳ ಸಂಖ್ಯೆ | ವಿಜೇತರಸಂಖ್ಯೆ (ಪ್ರಥಮ-1, ದ್ವಿತೀಯ-1,ತೃತೀಯ-1) |
|---|---|---|---|
| 1 | **ಕಂಠಪಾಠ:** ಕನ್ನಡ,ಇಂಗ್ಲೀಷ್, ಹಿಂದಿ, ಸಂಸ್ಕೃತ, ಉರ್ದು, ಮರಾಠಿ, ತೆಲುಗು, ತಮಿಳು, ತುಳು, ಕೊಂಕಣಿ | 10 | 30 |
| 2 | ಧಾರ್ಮಿಕ ಪಠಣ(ಸಂಸ್ಕೃತ,ಅರೇಬಿಕ್) | 02 | 06 |
| 3 | ಲಘು ಸಂಗೀತ | 01 | 03 |
| 4 | ಛದ್ಮ ವೇಷ | 01 | 03 |
| 5 | ಕಥೆ ಹೇಳುವುದು | 01 | 03 |
| 6 | ಚಿತ್ರಕಲೆ | 01 | 03 |
| 7 | ಅಭಿನಯ ಗೀತೆ | 01 | 03 |
| 8 | ಕ್ಲೇ ಮಾಡಲಿಂಗ್ | 01 | 03 |
| 9 | ಭಕ್ತಿ ಗೀತೆ | 01 | 03 |
| 10 | ಆಶು ಭಾಷಣ | 01 | 03 |
| 11 | ಕವನ/ಪದ್ಯ ವಾಚನ | 01 | 03 |
| 12 | ಮಿಮಿಕ್ರಿ | 01 | 03 |
| | **ಒಟ್ಟು** | **22** | **66** |

CamScanner

**8 ರಿಂದ 12ನೇ ತರಗತಿ:**

**ವೈಯುಕ್ತಿಕ ಸ್ಪರ್ಧೆಗಳು-22 ಹಾಗೂ ಸಾಮೂಹಿಕ ಸ್ಪರ್ಧೆಗಳು-3**

| ವೈಯಕ್ತಿಕವಿಭಾಗ | | | | ಸಾಮೂಹಿಕವಿಭಾಗ | | | |
|---|---|---|---|---|---|---|---|
| ಕ್ರ. ಸಂ | ಸ್ಪರ್ಧೆಗಳವಿವರ | ಸ್ಪರ್ಧೆ ಗಳ ಸಂಖ್ಯೆ | ವಿಜೇತರ ಸಂಖ್ಯೆ (ಪ್ರಥಮ-1, ದ್ವಿತೀಯ-1,ತೃತೀಯ-1) | ಕ್ರ. ಸಂ | ಸ್ಪರ್ಧೆಗಳ ವಿವರ | ಸ್ಪರ್ಧೆ ಗಳ ಸಂಖ್ಯೆ | ವಿಜೇತರ ಸಂಖ್ಯೆ (ಪ್ರಥಮ-1, ದ್ವಿತೀಯ-1, ತೃತೀಯ-1) |
| 1 | **ಭಾಷಣ:** ಕನ್ನಡ,ಇಂಗ್ಲೀಷ್,ಹಿಂದಿ, ಸಂಸ್ಕೃತ,ಉರ್ದು, ತುಳು, ಮರಾಠಿ,ತೆಲುಗು,ತಮಿಳು ಕೊಂಕಣಿ | 10 | 30 | 1 | ಜಾನಪದ ನೃತ್ಯ | 01 | 06 |
| 2 | ಧಾರ್ಮಿಕ ಪಠಣ (ಸಂಸ್ಕೃತ,ಅರೇಬಿಕ್) | 02 | 06 | 2 | ಕ್ವಿಜ್ | 01 | 02 |
| 3 | ಜಾನಪದ ಗೀತೆ | 01 | 03 | 3 | ಕವ್ವಾಲಿ | 01 | 06 |
| 4 | ಭಾವ ಗೀತೆ | 01 | 03 | | | | |
| 5 | ಭರತನಾಟ್ಯ | 01 | 03 | | | | |
| 6 | ಛದ್ಮ ವೇಷ | 01 | 03 | | | | |
| 7 | ಚಿತ್ರಕಲೆ | 01 | 03 | | | | |
| 8 | ಮಿಮಿಕ್ರಿ | 01 | 03 | | | | |
| 9 | ಚರ್ಚಾಸ್ಪರ್ಧೆ | 01 | 03 | | | | |
| 10 | ರಂಗೋಲಿ | 01 | 03 | | | | |
| 11 | ಗಝಲ್ | 01 | 03 | | | | |
| 12 | ಕವನ/ಪದ್ಯ ವಾಚನ | 01 | 03 | | | | |
| 13 | ಆಶು ಭಾಷಣ | 01 | 03 | | | | |
| | **ಒಟ್ಟು** | **23** | **69** | | **ಒಟ್ಟು** | **03** | **14** |

**ಸಂಘಟನಾ ನಿಯಮಗಳು:**

- ಸಂಘಟನೆಯಲ್ಲಿ ಯಾವುದೇ ಲೋಪದೋಷ ಬಾರದಂತೆ ಎಚ್ಚರವಹಿಸಬೇಕು.
- ಜಿಲ್ಲಾಮಟ್ಟದ ಸಮಿತಿಯಲ್ಲಿ ಸಂಸದರು/ ಉಸ್ತುವಾರಿಮಂತ್ರಿ/ ಜಿಲ್ಲಾಮಂತ್ರಿಯವರು ಹಾಗೂ ಬ್ಲಾಕ್ ಸಂಘಟನಾ ಸಮಿತಿಯಲ್ಲಿ ಕ್ಷೇತ್ರದ ಶಾಸಕರು ಅಧ್ಯಕ್ಷರಾಗಿರುತ್ತಾರೆ.
- ರಾಜ್ಯ ಮಟ್ಟದ ಸಮಿತಿಯಲ್ಲಿ ಮಾನ್ಯ ಶಿಕ್ಷಣ ಸಚಿವರು ಅಧ್ಯಕ್ಷರಾಗಿರುತ್ತಾರೆ.
- ಆಯಾ ಹಂತದಲ್ಲಿನ ಪ್ರಧಾನ ಅಧಿಕಾರಿಗಳು, ಪ್ರತಿಷ್ಠಿತ ವ್ಯಕ್ತಿಗಳು ಸದಸ್ಯರಾಗಿರುವ ಈ ಸಮಿತಿಗೆ ಬ್ಲಾಕ್ ಮಟ್ಟದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಯವರು, ಜಿಲ್ಲಾ ಮಟ್ಟದಲ್ಲಿ ಉಪನಿರ್ದೇಶಕರು (ಆಡಳಿತ) ಹಾಗೂ ರಾಜ್ಯ ಮಟ್ಟದಲ್ಲಿ ನಿರ್ದೇಶಕರು,ಮೈನಾರಿಟಿ ರವರು ಕಾರ್ಯದರ್ಶಿಯಾಗಿರುತ್ತಾರೆ.

**ವಿವಿಧ ಸಮಿತಿಗಳು:**

ಸಂಘಟನಾ ಸಮಿತಿಯು ಈ ಕೆಳಕಂಡ ಸಮಿತಿಗಳನ್ನು ರಚಿಸಿ, ಆಯಾ ಕ್ಷೇತ್ರದಲ್ಲಿ ಅನುಭವವಿರುವ ಕ್ರಿಯಾಶೀಲ ವ್ಯಕ್ತಿಗಳನ್ನೇ ಸಮಿತಿಗಳ ಅಧ್ಯಕ್ಷರು ಹಾಗೂ ಸದಸ್ಯರುಗಳಾಗಿ ನೇಮಕ ಮಾಡಬೇಕು. ಸಮಿತಿಗಳಿಗೆ ನಿರ್ದಿಷ್ಟ ಕಾರ್ಯಭಾರಗಳನ್ನು ವಹಿಸಿ, ಸಕಾಲದಲ್ಲಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವುದು.

ಸ್ವಾಗತ ಸಮಿತಿ, ಕ್ರಿಯಾ ಸಮಿತಿ, ಆಹಾರ ಸಮಿತಿ, ನೋಂದಣಿ ಸಮಿತಿ, ಮಕ್ಕಳ ಸುರಕ್ಷತೆ ಹಾಗೂ ರಕ್ಷಣಾ ಸಮಿತಿ, ಕಾನೂನು ಶಿಸ್ತು ಪಾಲನಾ ಸಮಿತಿ, ಸಾರಿಗೆ ಸಮಿತಿ, ವಸತಿ ಸಮಿತಿ, ರಂಗ ವೇದಿಕೆ /ಸಭಾಂಗಣ ಸಮಿತಿ, ತೀರ್ಪುಗಾರರ ಮಂಡಳಿ ಸಮಿತಿ, ಆರ್ಥಿಕ ಸಮಿತಿ, ಬೆಳಕು, ಧ್ವನಿವರ್ಧಕ, ತಾಂತ್ರಿಕ ನಿರ್ವಹಣಾ ಸಮಿತಿ, ಪ್ರಚಾರ ಸಮಿತಿ, ಇತರೆ ಅಗತ್ಯ ಸಮಿತಿಗಳು

CamScanner

**ಪ್ರಚಾರ**:

- ಪ್ರತಿಭಾ ಕಾರಂಜಿ/ಕಲೋತ್ಸವ ಕಾರ್ಯಕ್ರಮದ ಬಗ್ಗೆ ದಿನಪತ್ರಿಕೆ, ಆಕಾಶವಾಣಿ ಮುಂತಾದ ಪ್ರಸಾರ ಮಾಧ್ಯಮಗಳ ಮೂಲಕ ವ್ಯಾಪಕ ಪ್ರಚಾರ ಮಾಡುವುದು.
- ಕಾರ್ಯಕ್ರಮದ ಮಹತ್ವ ಹಾಗೂ ಕಾರ್ಯಕ್ರಮ ನಡೆಯುವ ದಿನಾಂಕವನ್ನು, ಕಾರ್ಯಕ್ರಮ ನಡೆಸುವ ಹಿಂದಿನ ದಿನ ಸ್ಥಳೀಯ ಮಕ್ಕಳಿಂದ ಮೆರವಣಿಗೆ ಏರ್ಪಡಿಸಿ ಸಾರ್ವಜನಿಕರ ಗಮನ ಸೆಳೆಯುವುದು.
- ಈ ಕಾರ್ಯಕ್ರಮವು ಕರ್ನಾಟಕ ರಾಜ್ಯದಲ್ಲಿ ಮಕ್ಕಳ ಹಬ್ಬವಾಗಿ ಆಚರಿಸುವಂತಹ ವಾತಾವರಣವನ್ನು ಪ್ರಚಾರದ ಮೂಲಕ ಕಲ್ಪಿಸಬೇಕು. ಎಲ್ಲಾ ಹಂತದ ಎಲ್ಲಾ ಸ್ಪರ್ಧೆಗಳ ಬಗ್ಗೆ ವ್ಯಾಪಕ ಪ್ರಚಾರವನ್ನು ನೀಡಲು ಆಯಾ ಹಂತದಲ್ಲಿನ ನೋಡಲ್ ಅಧಿಕಾರಿಗಳು ಅಗತ್ಯ ಕ್ರಮವಹಿಸುವುದು.

## ತೀರ್ಪುಗಾರರ ನೇಮಕ:

- ತೀರ್ಪುಗಾರರ ನೇಮಕ ಒಂದು ವಿಶಿಷ್ಟವಾದುದು ಹಾಗೂ ಗಂಭೀರವಾದುದು. ಪ್ರತಿಭೆಗೆ ನ್ಯಾಯ ಒದಗಿಸುವ ಉತ್ಕೃಷ್ಟ ಮನೋಭಾವ ಮತ್ತು ಆಯಾ ಕ್ಷೇತ್ರಗಳಲ್ಲಿ ಜ್ಞಾನ, ಅನುಭವವುಳ್ಳವರನ್ನು ನೇಮಿಸಬೇಕು.
- ತೀರ್ಪುಗಾರರು ಸ್ಪರ್ಧಾರ್ಥಿಗಳ ಬಂಧುಗಳಾಗಿರಬಾರದು. ಅದೇ ಶಾಲೆಯ ಶಿಕ್ಷಕರಾಗಿರಬಾರದು. ಸರ್ಕಾರಿ/ಅನುದಾನಿತ ಶಾಲೆಗಳಲ್ಲಿ ಸಂಗೀತ, ನೃತ್ಯ ನಾಟಕ, ಚಿತ್ರಕಲೆ, ಕರಕೌಶಲ ವಿಷಯಕ್ಕೆ ಸಂಬಂಧಿಸಿದಂತೆ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರನ್ನೇ ಕಡ್ಡಾಯವಾಗಿ ನೇಮಕ ಮಾಡಿಕೊಳ್ಳುವುದು ಅಂತಹ ಶಿಕ್ಷಕರು ಲಭ್ಯವಿಲ್ಲದಿದ್ದಲ್ಲಿ ವಿಷಯಕ್ಕೆ ಸಂಬಂಧಿಸಿದ ಸ್ಥಳೀಯ ಕಲಾವಿದರು ಹಾಗೂ ನಿವೃತ್ತ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುವುದು.
- ತೀರ್ಪುಗಾರರಿಂದ ತಮ್ಮ ಹತ್ತಿರದ ಬಂಧುಗಳು/ವಿದ್ಯಾರ್ಥಿಗಳು ಈ ಸ್ಪರ್ಧೆಯಲ್ಲಿ ಭಾಗವಹಿಸುತ್ತಿಲ್ಲ ಎಂಬ ಘೋಷಣಾ ಪತ್ರ ಪಡೆದುಕೊಳ್ಳಬೇಕು.
- ತೀರ್ಪುಗಾರರ ಸಮಿತಿ, ಸಭೆಗಳನ್ನು ನಡೆಸಿ ಎಲ್ಲರ ಅಭಿಪ್ರಾಯದೊಂದಿಗೆ ಮಾರ್ಗಸೂಚಿ ತಯಾರಿಸಿ, ಸರ್ಧೆಗಳಲ್ಲಿ ಗಮನಿಸಬೇಕಾದ ಅಂಶಗಳನ್ನು ಹಾಗೂ ನೀಡಬೇಕಾದ ಅಂಕಗಳನ್ನು ಪಟ್ಟಿಮಾಡಿ ಪ್ರತಿ ತೀರ್ಪುಗಾರರಿಗೆ ವಿತರಿಸುವುದು,
- ಅದರಂತೆ ತೀರ್ಪುಗಾರರು ಕ್ರಮವಹಿಸುವುದು, ತೀರ್ಪುಗಾರಿಕೆಯು ಪಾರದರ್ಶಕವಾಗಿರಬೇಕು. ಎಲ್ಲಾ ವಿಷಯಗಳಲ್ಲಿಯೂ ಅಡಕವಾಗಿರುವ ಮಹತ್ವದ ಅಂಶಗಳನ್ನು ಗಮನಿಸಿ ಅಂಕ ನೀಡಬೇಕು. **ಉದಾ**: ಸಂಗೀತದಲ್ಲಿ - ಭಾವ, ಮಾಧುರ್ಯ, ಲಯ, ತಾಳ, ಸಾಹಿತ್ಯ , ನೃತ್ಯದಲ್ಲಿ - ಲಯ, ಭಂಗಿ, ಭಾವ, ನಾಟಕದಲ್ಲಿ – ರಂಗಸಜ್ಜಿಕೆ, ಬೆಳಕು, ವಾಚಕಾಭಿನಯ, ಆಂಗಿಕಾಭಿನಯ, ನಿಲುವು, ವಸ್ತ್ರಾಲಂಕಾರ, ಪ್ರಸಾದನ.
- ಕಾರ್ಯಕ್ರಮ ಪೂರ್ಣಗೊಳ್ಳುವವರೆಗೂ ಆಯ್ಕೆಮಾಡಿರುವ ತೀರ್ಪುಗಾರರ ಬದಲಾವಣೆ ಮಾಡುವಂತಿಲ್ಲ.
- ಯಾವುದೇ ಸ್ಪರ್ಧೆಯ ತೀರ್ಪಿನ ಬಗ್ಗೆ ದೂರುಗಳು ಬಂದಲ್ಲಿ ತೀರ್ಪುಗಾರರ ಮಂಡಳಿ ಸಮಿತಿ ದೂರಿನ ಬಗ್ಗೆ ಪರಿಶೀಲಿಸಿ ನ್ಯಾಯೋಚಿತ ನಿರ್ಣಯ ಕೈಗೊಳ್ಳುವುದು.

**ತಾತ್ಕಾಲಿಕ ವೇಳಾಪಟ್ಟಿ**

| ಕ್ರ.ಸಂ | ಹಂತ | ಅವಧಿ | ಷರಾ |
|---|---|---|---|
| 1 | ಶಾಲಾ ಹಂತ | ಜುಲೈ-2023ರೊಳಗೆ | |
| 2 | ಕ್ಲಸ್ಟರ್ ಹಂತ | ಆಗಸ್ಟ್-2023ರೊಳಗೆ | |
| 3 | ಬ್ಲಾಕ್ ಹಂತ | ಸೆಪ್ಟಂಬರ್-2023ರೊಳಗೆ | |
| 4 | ಜಿಲ್ಲಾ ಹಂತ | ನವೆಂಬರ್-2023ರೊಳಗೆ | |
| 5 | ರಾಜ್ಯ ಹಂತ | ಡಿಸೆಂಬರ್-2023ರೊಳಗೆ | |

**ಸಾಮಾನ್ಯ ಸೂಚನೆಗಳು:**

1. ಕಾರ್ಯಕ್ರಮದ ಸಂಬಂಧ ವಿದ್ಯಾರ್ಥಿಗಳಿಂದ ಯಾವುದೇ ರೀತಿಯ ಶುಲ್ಕವನ್ನು ವಸೂಲಿ ಮಾಡಬಾರದು.
2. ಅನುಬಂಧಗಳಲ್ಲಿ ನೀಡಿರುವ ಸೂಚನೆ / ವಿಶೇಷ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸುವುದು.

3. ತಾಲ್ಲೂಕು ಮಟ್ಟದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಜಿಲ್ಲಾ ಹಂತದಲ್ಲಿ ಉಪನಿರ್ದೇಶಕರು (ಆಡಳಿತ) ಇವರ ನೇತೃತ್ವದಲ್ಲಿ ಸ್ಪರ್ಧೆಗಳನ್ನು ನಡೆಸುವುದು. ಸ್ಪರ್ಧೆಗಳನ್ನು ಶಾಲಾ, ಕ್ಲಸ್ಟರ್, ತಾಲ್ಲೂಕು, ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ಕಡ್ಡಾಯವಾಗಿ ನಡೆಸುವುದು.
4. ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಸಮಿತಿಗಳು 3 ಅಥವಾ 4 ಸಭೆಗಳನ್ನು ನಡೆಸಿ ವಿವಿಧ ಅಂಶಗಳ ಬಗ್ಗೆ ನಿರ್ಣಯ ಕೈಗೂಂಡು ಅನುಷ್ಠಾನಗೊಳಿಸುವುದು.
5. ಮಕ್ಕಳ ಸುರಕ್ಷತೆ ಹಾಗೂ ಸಾರಿಗೆ ವ್ಯವಸ್ಥೆಯಲ್ಲಿ ಅಹಿತಕರ ಘಟನೆಗಳು ಸಂಭವಿಸದಂತೆ ಮುಖ್ಯ ಶಿಕ್ಷಕರು, ಶಿಕ್ಷಕರು ಹಾಗೂ ಅಧಿಕಾರಿಗಳು ಮುಂಜಾಗ್ರತಾ ಕ್ರಮ ಕೈಗೊಳ್ಳುವುದು. ಒಟ್ಟಾರೆ ವಿದ್ಯಾರ್ಥಿಗಳ ಸಂಪೂರ್ಣ ಜವಾಬ್ದಾರಿ ಶಿಕ್ಷಕರದ್ದೇ ಆಗಿರುತ್ತದೆ.
6. ಪ್ರತಿಭಾ ಕಾರಂಜಿ ಕಾರ್ಯಕ್ರಮಕ್ಕಾಗಿ ರೂಪಿಸುವ ಸಮಿತಿಗಳಲ್ಲಿ ಎಲ್ಲಾ ಕ್ಷೇತ್ರದ ವ್ಯಕ್ತಿಗಳನ್ನು ಪ್ರಾತಿನಿಧಿಕವಾಗಿ ಸೇರಿಸಬೇಕು. ಉದಾ: ಸಾಹಿತಿ/ ಕಲಾವಿದರು, ಪತ್ರಿಕಾ ಸಂಪಾದಕರು ಮುಂತಾದವರು.
7. ಕೂಡಲೇ ಬ್ಲಾಕ್ ಮಟ್ಟದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ಜಿಲ್ಲಾ ಮಟ್ಟದಲ್ಲಿ ಉಪನಿರ್ದೇಶಕರು ಕಾರ್ಯೋನ್ಮುಖರಾಗಿ ಪೂರ್ವಭಾವಿ ತಯಾರಿಯೊಂದಿಗೆ ಸಮಿತಿ ಅಧ್ಯಕ್ಷರುಗಳು, ನೋಡಲ್ ಅಧಿಕಾರಿಗಳು ಮುಂತಾದವರ ನೇಮಕ ಮಾಡಿ ಸಭೆಯನ್ನು ನಡೆಸಿ ವ್ಯವಸ್ಥಿತ ಯೋಜನೆ ರೂಪಿಸಿಕೊಳ್ಳುವುದು.
8. ಪಕ್ಷಪಾತ, ಉದಾಸೀನತೆ, ಅಸಮರ್ಥ ತೀರ್ಪುಗಾರರ ನೇಮಕ, ಸಮಯಕ್ಕೆ ಸರಿಯಾಗಿ ಮಾಹಿತಿ ನೀಡದಿರುವಿಕೆ, ಮಕ್ಕಳ ಸುರಕ್ಷತೆ ಮುಂತಾದ ವಿಷಯಗಳ ಬಗ್ಗೆ ದೂರು ಬಾರದಂತೆ ಎಚ್ಚರ ವಹಿಸುವುದು.
9. ಎಲ್ಲಾ ಹಂತದ ಕಾರ್ಯಕ್ರಮಗಳನ್ನು ನಿಗಧಿಪಡಿಸಿದ ದಿನಾಂಕಗಳಲ್ಲೇ ಪೂರ್ಣಗೊಳಿಸುವುದು..

**ವಿಶೇಷ ಸೂಚನೆಗಳು:**

- ಉಪನಿರ್ದೇಶಕರು(ಆಡಳಿತ) ರವರುಗಳು ನೀಡಿರುವ ಮಾಹಿತಿಯಂತೆ ತಾಲ್ಲೂಕು/ಕ್ಲಸ್ಟರ್‌ಗಳ ಸಂಖ್ಯೆಗಳನ್ನು ಆಧರಿಸಿ ಪ್ರತಿಭಾ ಕಾರಂಜಿ / ಕಲೋತ್ಸವ ಕಾರ್ಯಕ್ರಮಗಳಿಗೆ ಅನುದಾನ ಬಿಡುಗಡೆ ಮಾಡಲಾಗುವುದು.
- ಪ್ರಸಕ್ತ ಸಾಲಿನ ಪ್ರತಿಭಾ ಕಾರಂಜಿ/ಕಲೋತ್ಸವ ಕಾರ್ಯಕ್ರಮಕ್ಕೆ ಯಾವುದೇ ರೀತಿಯ ಹೆಚ್ಚಿನ ಅನುದಾನಕ್ಕೆ ಬೇಡಿಕೆ ಸಲ್ಲಿಸದೇ ಆಯಾ ತಾಲ್ಲೂಕು/ ಜಿಲ್ಲೆಗಳಿಗೆ ನಿಗಧಿಪಡಿಸಿರುವ ಮೊತ್ತಕ್ಕನುಗುಣವಾಗಿ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಯಾವುದೇ ಕುಂದುಕೊರತೆ, ದೂರುಗಳಿಗೆ ಅವಕಾಶ ನೀಡದೆ ನಿಗದಿತ ಕಾಲಮಿತಿಯೊಳಗೆ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸುವುದು.
- ಉಪನಿರ್ದೇಶಕರು ಹಾಗೂ ಪ್ರಭಾರಾಧಿಕಾರಿಗಳು ಶಿಕ್ಷಕರ ಕಲ್ಯಾಣನಿಧಿ, ಬೆಂಗಳೂರು ಇವರಿಂದ ಪ್ರತಿ ಕ್ಲಸ್ಟರ್ ಹಂತದ ಸ್ಪರ್ಧೆಗೆ ರೂ. 6,000/-ಗಳನ್ನು ಸ್ಪರ್ಧೆಯ ಆಯೋಜನೆಗೆ (ಬಹುಮಾನ/ಪ್ರಶಸ್ತಿ ಪತ್ರ/ಇತರೆ ವೆಚ್ಚ) ನೀಡಲಾಗುವುದು.

ಆಯುಕ್ತರು
ಶಾಲಾ ಶಿಕ್ಷಣ ಇಲಾಖೆ.

**ಪ್ರತಿಯನ್ನು ಅಗತ್ಯ ಕ್ರಮಕ್ಕಾಗಿ :**

1. ಉಪನಿರ್ದೇಶಕರು(ಆಡಳಿತ) ಮತ್ತು ಅಭಿವೃದ್ಧಿ ಹಾಗೂ ಜಿಲ್ಲಾ ಯೋಜನಾ ಉಪ ಸಮನ್ವಯಾಧಿಕಾರಿಗಳು, ಶಾಲಾ ಶಿಕ್ಷಣ ಇಲಾಖೆ – ಎಲ್ಲಾ ಜಿಲ್ಲೆಗಳು ರವರಿಗೆ ಅಗತ್ಯ ಕ್ರಮಕ್ಕಾಗಿ
2. ರಾಜ್ಯದ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳು, ಬಿ.ಆರ್.ಸಿ., ಬಿ.ಆರ್.ಪಿ ಮತ್ತು ಸಿ.ಆರ್.ಸಿ. – ಎಲ್ಲಾ ಜಿಲ್ಲೆಗಳು ರವರಿಗೆ ಅಗತ್ಯ ಕ್ರಮಕ್ಕಾಗಿ
3. ಎಲ್ಲಾ ಜಿಲ್ಲೆಗಳ ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್
4. ನಿರ್ದೇಶಕರು, ಪ್ರಾಥಮಿಕ ಶಿಕ್ಷಣ, ಪ್ರೌಢಶಿಕ್ಷಣ, ಡಿ.ಎಸ್.ಇ.ಆರ್.ಟಿ., ಪಠ್ಯಪುಸ್ತಕ ಸಂಘ, ಕ.ಪ್ರೌ.ಶಿ.ಪ.ಮಂಡಳಿ, ಇತರೆ ಪರೀಕ್ಷೆಗಳು, ಶಾಲಾ ಶಿಕ್ಷಣ ಇಲಾಖೆ, ನಿರ್ದೇಶಕರು (ಗುಣಮಟ್ಟ)
5. ವಿಭಾಗೀಯ ಸಹನಿರ್ದೇಶಕರು, ಬೆಂಗಳೂರು, ಮೈಸೂರು, ಗುಲ್ಬರ್ಗಾ, ಬೆಳಗಾಂ.
6. ಪ್ರಾಂಶುಪಾಲರು ಸಿ.ಟಿ.ಇ., ಜಮಖಂಡಿ, ಬೆಳಗಾವಿ, ಗುಲ್ಬರ್ಗಾ, ಚಿತ್ರದುರ್ಗ, ಮೈಸೂರು, ಮಂಗಳೂರು,
7. ಜಂಟಿ ನಿರ್ದೇಶಕರು (ಆಡಳಿತ) ಆಯುಕ್ತರ ಕಛೇರಿ, ಬೆಂಗಳೂರು.
8. ಉಪನಿರ್ದೇಶಕರು ಎಸ್.ಡಬ್ಲ್ಯೂ.ಎಫ್ / ಟಿ.ಬಿ.ಎಫ್., ಬೆಂಗಳೂರು

CamScanner

9. ಸಹನಿರ್ದೇಶಕರು, ಎಂ.ಎಂ.ಎಸ್., ಶಾಲಾ ಶಿಕ್ಷಣ ಹಾಗೂ ದೈಹಿಕ ಶಿಕ್ಷಣ, ಆಯುಕ್ತರ ಕಛೇರಿ, ಬೆಂಗಳೂರು,
10. ಜಿಲ್ಲಾ ಹಾಗೂ ತಾಲ್ಲೂಕು ಖಜಾನಾಧಿಕಾರಿಗಳು, ಎಲ್ಲಾ ಜಿಲ್ಲೆಗಳು ರವರಿಗೆ ಕಳುಹಿಸುತ್ತಾ ಪ್ರಥಮಾದ್ಯತೆಯಲ್ಲಿ ಬಿಲ್ಲನ್ನು ಪುರಸ್ಕರಿಸಲು ತಿಳಿಸಿದೆ.
11. ಮುಖ್ಯ ಲೆಕ್ಕಾಧಿಕಾರಿಗಳು, ಆಯುಕ್ತರ ಕಛೇರಿ, ಬೆಂಗಳೂರು,
12. ನಿರ್ದೇಶಕರು, ಖಜಾನೆ ಇಲಾಖೆ, ಪೋಡಿಯಂ ಬ್ಲಾಕ್, ಬೆಂಗಳೂರು-560001.
13. ಉಪನಿರ್ದೇಶಕರು [ಯೋಜನೆ], ಆಯುಕ್ತರ ಕಛೇರಿ, ಬೆಂಗಳೂರು,
14. ಉಪನಿರ್ದೇಶಕರು, ಮೈನಾರಿಟಿ ಹಾಗೂ ನೋಡಲ್ ಅಧಿಕಾರಿ, ಆಯುಕ್ತರ ಕಛೇರಿ, ಬೆಂಗಳೂರು
15. ರಾಜ್ಯದ ಎಲ್ಲಾ ವಿಭಾಗೀಯ ಅಧೀಕ್ಷಕರು [ಸಂಗೀತ, ನೃತ್ಯ, ನಾಟಕ], ಮತ್ತು ವಿಷಯ ಪರಿವೀಕ್ಷಕರು

**ಮಾಹಿತಿಯನ್ನು ಮಾನ್ಯರ ಅವಗಾಹನೆಗೆ :**

- ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು,
- ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ ಬೆಂಗಳೂರು
- ಅಪರ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಗುಲ್ಬರ್ಗಾ
- ಕಛೇರಿಪ್ರತಿ,

CamScanner

ಅನುಬಂಧ

## ವಿಷಯ: 2023-24ನೇ ಸಾಲಿನ ಪ್ರತಿಭಾ ಕಾರಂಜಿ ಕಾರ್ಯಕ್ರಮದ ಅನುದಾನ ಹಂಚಿಕೆ ವಿವರ

ಲೆಕ್ಕ ಶೀರ್ಷಿಕೆ:**2202-01-109-0-10-059**

| ಕ್ರ.ಸಂ. | ಜಿಲ್ಲೆಯ ಹೆಸರು | ತಾಲ್ಲೂಕುಗಳ ಸಂಖ್ಯೆ | ತಾಲ್ಲೂಕು ಹಂತಕ್ಕೆ ನಿಗಧಿಪಡಿಸಿದ ಮೊತ್ತ (ಒಂದು ತಾಲ್ಲೂಕಿಗೆ ರೂ.90.200/-ರಂತೆ) | ಜಿಲ್ಲಾ ಹಂತಕ್ಕೆ | | | ರಾಜ್ಯ ಹಂತ |
|---|---|---|---|---|---|---|---|
| | | | | ಜಿ.ಮ.ಕ್ಕೆ ನಿಗಧಿಸಿದ ಮೊತ್ತ | ಪ್ರಯಾಣ ಭತ್ಯೆ (ಒಂದು ತಾಲ್ಲೂಕಿ ರೂ.7,000 ರಂತೆ) | ಒಟ್ಟು ಮೊತ್ತ | |
| 1 | ಬಾಗಲಕೋಟೆ | 6 | 541200 | 131500 | 42000 | 173500 | |
| 2 | ಬಳ್ಳಾರಿ | 5 | 451000 | 131500 | 35000 | 166500 | |
| 3 | ಬೆಳಗಾಂ | 7 | 631400 | 131500 | 49000 | 180500 | |
| 4 | ಬೆಂಗಳೂರು ದಕ್ಷಿಣ | 5 | 451000 | 131500 | 35000 | 166500 | |
| 5 | ಬೆಂಗಳೂರು ಗ್ರಾಮಾಂತರ | 4 | 360800 | 131500 | 28000 | 159500 | |
| 6 | ಬೆಂಗಳೂರು ಉತ್ತರ | 4 | 360800 | 131500 | 28000 | 159500 | |
| 7 | ಬೀದರ್ | 5 | 451000 | 131500 | 35000 | 166500 | |
| 8 | ಚಾಮರಾಜನಗರ | 5 | 451000 | 131500 | 35000 | 166500 | |
| 9 | ಚಿಕ್ಕಬಳ್ಳಾಪುರ | 6 | 541200 | 131500 | 42000 | 173500 | |
| 10 | ಚಿಕ್ಕಮಗಳೂರು | 8 | 721600 | 131500 | 56000 | 187500 | |
| 11 | ಚಿಕ್ಕೋಡಿ | 8 | 721600 | 131500 | 56000 | 187500 | |
| 12 | ಚಿತ್ರದುರ್ಗ | 6 | 541200 | 131500 | 42000 | 173500 | |
| 13 | ದಕ್ಷಿಣ ಕನ್ನಡ (ಮಂಗಳೂರು | 7 | 631400 | 131500 | 49000 | 180500 | |
| 14 | ದಾವಣಗೆರೆ | 6 | 541200 | 131500 | 42000 | 173500 | |
| 15 | ಧಾರವಾಡ | 7 | 631400 | 131500 | 49000 | 180500 | |
| 16 | ಗದಗ | 6 | 541200 | 131500 | 42000 | 173500 | |
| 17 | ಹಾಸನ | 8 | 721600 | 131500 | 56000 | 187500 | |
| 18 | ಹಾವೇರಿ | 7 | 631400 | 131500 | 49000 | 180500 | 2048500 |
| 19 | ಕಲ್ಬುರ್ಗಿ | 8 | 721600 | 131500 | 56000 | 187500 | |
| 20 | ಕೊಡಗು | 3 | 270600 | 131500 | 21000 | 152500 | |
| 21 | ಕೋಲಾರ | 6 | 541200 | 131500 | 42000 | 173500 | |
| 22 | ಕೊಪ್ಪಳ | 4 | 360800 | 131500 | 28000 | 159500 | |
| 23 | ಮಧುಗಿರಿ | 4 | 360800 | 131500 | 28000 | 159500 | |
| 24 | ಮಂಡ್ಯ | 8 | 721600 | 131500 | 56000 | 187500 | |
| 25 | ಮೈಸೂರು | 9 | 811800 | 131500 | 63000 | 194500 | |
| 26 | ರಾಮನಗರ | 4 | 360800 | 131500 | 28000 | 159500 | |
| 27 | ರಾಯಚೂರು | 5 | 451000 | 131500 | 35000 | 166500 | |
| 28 | ಶಿವಮೊಗ್ಗ | 7 | 631400 | 131500 | 49000 | 180500 | |
| 29 | ಶಿರಸಿ | 6 | 541200 | 131500 | 42000 | 173500 | |
| 30 | ತುಮಕೂರು | 6 | 541200 | 131500 | 42000 | 173500 | |
| 31 | ಉಡುಪಿ | 5 | 451000 | 131500 | 35000 | 166500 | |
| 32 | ಉತ್ತರ ಕನ್ನಡ (ಕಾರವಾರ) | 5 | 451000 | 131500 | 35000 | 166500 | |
| 33 | ವಿಜಯನಗರ | 5 | 451000 | 131500 | 35000 | 166500 | |
| 34 | ವಿಜಯಪುರ | 7 | 631400 | 131500 | 49000 | 180500 | |
| 35 | ಯಾದಗಿರಿ | 3 | 270600 | 131500 | 21000 | 152500 | |
| | **ಒಟ್ಟು** | **205** | 18491000 | 4602500 | 1435000 | **6037500** | **2048500** |

**ಘೋಷ್ವಾರೆ:**

| | | |
|---|---|---|
| 1 | ತಾಲ್ಲೂಕು ಹಂತ | 18491000 |
| 2 | ಜಿಲ್ಲಾ ಹಂತ | 4602500 |
| 3 | ಪ್ರಯಾಣ ಭತ್ಯೆ | 1435000 |
| 4 | ರಾಜ್ಯ ಹಂತ | 2048500 |
| | **ಒಟ್ಟು ಅನುದಾನ** | **26577000** |

ಆಯುಕ್ತರು
ಶಾಲಾ ಶಿಕ್ಷಣ ಇಲಾಖೆ.

CS CamScanner

CS CamScanner

## ಅನುಬಂಧ-1

### ತಾಲ್ಲೂಕು ಹಂತದ ಪ್ರತಿಭಾ ಕಾರಂಜಿ ಅನುದಾನದ ವಿಂಗಡನೆ

| ಬಹುಮಾನದ ಶ್ರೇಣಿ | ವೈಯುಕ್ತಿಕ ವಿಭಾಗ | | | | | | | | | ಸಾಮೂಹಿಕ ವಿಭಾಗ | | | | |
|---|---|---|---|---|---|---|---|---|---|---|---|---|---|---|
| | ತರಗತಿ 01 ರಿಂದ 04 | | | ತರಗತಿ 05 ರಿಂದ 07 | | | ತರಗತಿ 08 ರಿಂದ 12 | | | ತರಗತಿ 08 ರಿಂದ 12 | | | ಪ್ರತಿ ಬ್ಲಾಕ್‌ಹಂತಕ್ಕೆ ನೀಡುವ ಮೊತ್ತ | ರಾಜ್ಯದ ತಾಲ್ಲೂಕುಗಳಿಗೆ ತಗಲು ಮೊತ್ತ (87700*204) |
| | ಮೊತ್ತ | ಸ್ಪರ್ಧೆಗಳ ಸಂಖ್ಯೆ | ಒಟ್ಟು ಮೊತ್ತ | ಮೊತ್ತ | ಸ್ಪರ್ಧೆಗಳ ಸಂಖ್ಯೆ | ಒಟ್ಟು ಮೊತ್ತ | ಮೊತ್ತ | ಸ್ಪರ್ಧೆಗಳ ಸಂಖ್ಯೆ | ಒಟ್ಟು ಮೊತ್ತ | ಮೊತ್ತ | ಸ್ಪರ್ಧೆಗಳ ಸಂಖ್ಯೆ | ಒಟ್ಟು ಮೊತ್ತ | | |
| ಪ್ರಥಮ | 350 | | | 350 | | | 350 | | | 200 | | 2,800 | | |
| ದ್ವಿತೀಯ | 250 | | | 250 | | | 250 | | | 150 | | 2,100 | | |
| ತೃತೀಯ | 200 | | | 200 | | | 200 | | | 100 | | 1,400 | | |
| ಒಟ್ಟು | 800 | 16 | 12,800 | 800 | 19 | 15,200 | 800 | 20 | 16,000 | 450 | 3 | 6,300 | | |
| ತೀರ್ಪುಗಾರರ ಸಂಭಾವನೆ | 100*3*16 | | 4,800 | 100*3*19 | | 5,700 | 100*3*20 | | 6,000 | 100*3*3 | | 900 | | |
| ಆಯೋಜನಾ ವೆಚ್ಚ ಮತ್ತು ಪ್ರಮಾಣ ಪತ್ರ | | | | | | | | | | | | 22,500 | | |
| ಒಟ್ಟು ಮೊತ್ತ | | | 17,600 | | | 20,900 | | | 22,000 | | | 29700 | 90,200 | 1,84,91,000 |

ಒಟ್ಟು 205 ತಾಲ್ಲೂಕುಗಳಿಗೆ ಪ್ರತಿ ತಾಲ್ಲೂಕಿಗೆ ರೂ.90,200/-ರಂತೆ ಒಟ್ಟು ರೂ.184,91,000/-ಅನುದಾನ ನಿಗಧಿಪಡಿಸಿದೆ

ಷರಾ

1) ಬಹುಮಾನವಾಗಿ ನಿಗಧಿಪಡಿಸಿರುವ ಮೊತ್ತವನ್ನು ವಿಜೇತ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ಜಮಾ ಮಾಡುವುದು

2) ತಾಲ್ಲೂಕು ಮಟ್ಟದ ಪ್ರತಿಭಾ ಕಾರಂಜಿ ಕಾರ್ಯಕ್ರಮದಲ್ಲಿ ಭಾಗವಹಿಸುವ ವಿದ್ಯಾರ್ಥಿಗಳ ಪ್ರಯಾಣ ಭತ್ಯೆಯನ್ನು ಶಾಲಾ ಸಂಚಿತ ನಿಧಿ/ಚಾಲ್ತಿ ನಿಧಿಯಿಂದ ಭರಿಸುವುದು

3) 1 ರಿಂದ 4 ತರಗತಿಯವರೆಗಿನ ಕ್ರಸಂ.(1)- ಕಂಠ ಪಾಠ ಸ್ಪರ್ಧೆಯಲ್ಲಿ 10 ಭಾಷೆಗಳಿರುತ್ತವೆ. ಈ ಸ್ಪರ್ಧೆಯಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು ಸಂಬಂಧಪಟ್ಟ ಭಾಷೆಯನ್ನು ಪ್ರಥಮ ಅಥವಾ ದ್ವಿತೀಯ ಅಥವಾ ತೃತೀಯ ಭಾಷೆಯನ್ನಾಗಿ ಅಭ್ಯಸಿಸುತ್ತಿರಬೇಕು. ಆದ್ದರಿಂದ ಇದರಲ್ಲಿ 6 ಭಾಷೆಗಳಿಗೆ ಮಾತ್ರ ಬಹುಮಾನದ ಮೊತ್ತ ಬಿಡುಗಡೆಗೊಳಿಸಿದೆ. ಕ್ರಸಂ.(2)-ಧಾರ್ಮಿಕ ಪಠಣದಲ್ಲಿ ಎರಡು ಭಾಷೆಗಳಿರುತ್ತದೆ. ಆದ್ದರಿಂದ 16 ಸ್ಪರ್ಧೆಗಳಿಗೆ ಬಹುಮಾನದ ಮೊತ್ತ ಬಿಡುಗಡೆಗೊಳಿಸಿದೆ. (ಪ್ರತಿಯೊಂದು ತಾಲ್ಲೂಕಿನಲ್ಲಿ 10 ಭಾಷೆಗಳನ್ನು ಅಭ್ಯಸಿಸುವ ವಿದ್ಯಾರ್ಥಿಗಳು ಇರುವುದಿಲ್ಲ)

4) 5 ರಿಂದ 7 ತರಗತಿಯವರೆಗಿನ ಕ್ರಸಂ.(1)- ಕಂಠ ಪಾಠ ಸ್ಪರ್ಧೆಯಲ್ಲಿ 10 ಭಾಷೆಗಳಿರುತ್ತವೆ. ಈ ಸ್ಪರ್ಧೆಯಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು ಸಂಬಂಧಪಟ್ಟ ಭಾಷೆಯನ್ನು ಪ್ರಥಮ ಅಥವಾ ದ್ವಿತೀಯ ಅಥವಾ ತೃತೀಯ ಭಾಷೆಯನ್ನಾಗಿ ಅಭ್ಯಸಿಸುತ್ತಿರಬೇಕು. ಆದ್ದರಿಂದ ಇದರಲ್ಲಿ 7 ಭಾಷೆಗಳಿಗೆ ಮಾತ್ರ ಬಹುಮಾನದ ಮೊತ್ತ ಬಿಡುಗಡೆಗೊಳಿಸಿದೆ. ಕ್ರಸಂ.(2)-ಧಾರ್ಮಿಕ ಪಠಣದಲ್ಲಿ ಎರಡು ಭಾಷೆಗಳಿರುತ್ತದೆ. ಆದ್ದರಿಂದ 19 ಸ್ಪರ್ಧೆಗಳಿಗೆ ಬಹುಮಾನದ ಮೊತ್ತ ಬಿಡುಗಡೆಗೊಳಿಸಿದೆ. (ಪ್ರತಿಯೊಂದು ತಾಲ್ಲೂಕಿನಲ್ಲಿ 10 ಭಾಷೆಗಳನ್ನು ಅಭ್ಯಸಿಸುವ ವಿದ್ಯಾರ್ಥಿಗಳು ಇರುವುದಿಲ್ಲ)

5) 8 ರಿಂದ 12 ತರಗತಿಯವರೆಗಿನ ಕ್ರಸಂ.(1)- ಭಾಷಣ ಸ್ಪರ್ಧೆಯಲ್ಲಿ 10 ಭಾಷೆಗಳಿರುತ್ತವೆ. ಈ ಸ್ಪರ್ಧೆಯಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು ಸಂಬಂಧಪಟ್ಟ ಭಾಷೆಯನ್ನು ಪ್ರಥಮ ಅಥವಾ ದ್ವಿತೀಯ ಅಥವಾ ತೃತೀಯ ಭಾಷೆಯನ್ನಾಗಿ ಅಭ್ಯಸಿಸುತ್ತಿರಬೇಕು. ಆದ್ದರಿಂದ ಇದರಲ್ಲಿ 7 ಭಾಷೆಗಳಿಗೆ ಮಾತ್ರ ಬಹುಮಾನದ ಮೊತ್ತ ಬಿಡುಗಡೆಗೊಳಿಸಿದೆ. ಕ್ರಸಂ.(2)-ಧಾರ್ಮಿಕ ಪಠಣದಲ್ಲಿ ಎರಡು ಭಾಷೆಗಳಿರುತ್ತದೆ. ಆದ್ದರಿಂದ 20 ಸ್ಪರ್ಧೆಗಳಿಗೆ ಬಹುಮಾನದ ಮೊತ್ತ ಬಿಡುಗಡೆಗೊಳಿಸಿದೆ. (ಪ್ರತಿಯೊಂದು ತಾಲ್ಲೂಕಿನಲ್ಲಿ 10 ಭಾಷೆಗಳನ್ನು ಅಭ್ಯಸಿಸುವ ವಿದ್ಯಾರ್ಥಿಗಳು ಇರುವುದಿಲ್ಲ)

6) 8 ರಿಂದ 12 ತರಗತಿಯವರೆಗಿನ ಸಾಮೂಹಿಕ ವಿಭಾಗದ ಕ್ರಸಂ.(1) ಮತ್ತು (3)ರ ಸ್ಪರ್ಧೆಗಳಲ್ಲಿ ಪ್ರತಿ ತಂಡಲ್ಲಿ 6 ವಿದ್ಯಾರ್ಥಿಗಳು ಭಾಗವಹಿಸುವುದು ಹಾಗೂ ಕ್ರಸಂ(2)ರ ಸ್ಪರ್ಧೆಯಲ್ಲಿ ಇಬ್ಬರು ವಿದ್ಯಾರ್ಥಿಗಳು ಭಾಗವಹಿಸುವುದು.

ಆಯುಕ್ತರು
ಶಾಲಾ ಶಿಕ್ಷಣ ಇಲಾಖೆ.

CamScanner

CS CamScanner

## ಅನುಬಂಧ–2

### ಜಿಲ್ಲಾ ಹಂತದ ಪ್ರತಿಭಾ ಕಾರಂಜಿ ಅನುದಾನದ ವಿಂಗಡನೆ

| ಬಹುಮಾನದ ಶ್ರೇಣಿ | ವೈಯುಕ್ತಿಕ ವಿಭಾಗ | | | | | | ಸಾಮೂಹಿಕ ವಿಭಾಗ | | | ಪ್ರತಿ ಜಿಲ್ಲೆ ಹಂತಕ್ಕೆ ನೀಡುವ ಮೊತ್ತ | ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ತಗಲು ಮೊತ್ತ (131500*35) |
|---|---|---|---|---|---|---|---|---|---|---|---|
| | ತರಗತಿ 05 ರಿಂದ 07 | | | ತರಗತಿ 08 ರಿಂದ 12 | | | ತರಗತಿ 08 ರಿಂದ 12 | | | | |
| | ಮೊತ್ತ | ಸ್ಪರ್ಧೆಗಳ ಸಂಖ್ಯೆ | ಒಟ್ಟು ಮೊತ್ತ | ಮೊತ್ತ | ಸ್ಪರ್ಧೆಗಳ ಸಂಖ್ಯೆ | ಒಟ್ಟು ಮೊತ್ತ | ಮೊತ್ತ | ಸ್ಪರ್ಧೆಗಳ ಸಂಖ್ಯೆ | ಒಟ್ಟು ಮೊತ್ತ | | |
| ಪ್ರಥಮ | 700 | | | 800 | | | 500 | | 7,000 | | |
| ದ್ವಿತೀಯ | 500 | | | 600 | | | 400 | | 5,600 | | |
| ತೃತೀಯ | 300 | | | 400 | | | 300 | | 4,200 | | |
| ಒಟ್ಟು | 1,500 | 19 | 28,500 | 1800 | 20 | 36,000 | 1200 | 14 | 16,800 | | |
| ತೀರ್ಪುಗಾರರ ಸಂಭಾವನೆ | 200*3*19 | | 11,400 | 200*3*20 | | 12,000 | 200*3*3 | | 1,800 | | |
| ಆಯೋಜನಾ ವೆಚ್ಚ ಮತ್ತು ಪ್ರಮಾಣ ಪತ್ರ | | | | | | | | | 25,000 | | |
| ಒಟ್ಟು ಮೊತ್ತ | | | 39,900 | | | 48,000 | | | 43,600 | 131,500 | 46,02,500 |

ರೂ.131500 * 35 ಜಿಲ್ಲೆಗಳಿಗೆ ಕಾರ್ಯಕ್ರಮ ನಿರ್ವಹಿಸಲು– ರೂ.4602500/–

ರೂ.7000 * 205 ತಾಲ್ಲೂಕುಗಳಿಗೆ ತಗಲುವ ಪ್ರಯಾಣ ವೆಚ್ಚ – ರೂ.1435000/–

ಜಿಲ್ಲಾ ಹಂತದ ಪ್ರತಿಭಾ ಕಾರಂಜಿ ಒಟ್ಟು ಅನುದಾನದ – ರೂ.6037500/–

ಷರಾ 1) ಬಹುಮಾನವಾಗಿ ನಿಗಧಿಪಡಿಸಿರುವ ಮೊತ್ತವನ್ನು ವಿಜೇತ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ಜಮಾ ಮಾಡುವುದು

2) 5 ರಿಂದ 7 ತರಗತಿಯವರೆಗಿನ ಕ್ರ.ಸಂ.(1)– ಕಂಠ ಪಾಠ ಸ್ಪರ್ಧೆಯಲ್ಲಿ 10 ಭಾಷೆಗಳಿರುತ್ತವೆ. ಈ ಸ್ಪರ್ಧೆಯಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು ಸಂಬಂಧಪಟ್ಟ ಭಾಷೆಯನ್ನು ಪ್ರಥಮ ಅಥವಾ ದ್ವಿತೀಯ ಅಥವಾ ತೃತೀಯ ಭಾಷೆಯನ್ನಾಗಿ ಅಭ್ಯಸಿಸುತ್ತಿರಬೇಕು. ಆದ್ದರಿಂದ ಇದರಲ್ಲಿ 7 ಭಾಷೆಗಳಿಗೆ ಮಾತ್ರ ಬಹುಮಾನದ ಮೊತ್ತ ಬಿಡುಗಡೆಗೊಳಿಸಿದೆ. ಕ್ರ.ಸಂ.(2)–ಧಾರ್ಮಿಕ ಪಠಣದಲ್ಲಿ ಎರಡು ಭಾಷೆಗಳಿರುತ್ತದೆ. ಆದ್ದರಿಂದ 19 ಸ್ಪರ್ಧೆಗಳಿಗೆ ಬಹುಮಾನದ ಮೊತ್ತ ಬಿಡುಗಡೆಗೊಳಿಸಿದೆ. (ಪ್ರತಿಯೊಂದು ಜಿಲ್ಲೆಯಲ್ಲಿ 10 ಭಾಷೆಗಳನ್ನು ಅಭ್ಯಸಿಸುವ ವಿದ್ಯಾರ್ಥಿಗಳು ಇರುವುದಿಲ್ಲ)

3) 8 ರಿಂದ 12 ತರಗತಿಯವರೆಗಿನ ಕ್ರ.ಸಂ.(1)– ಭಾಷಣ ಸ್ಪರ್ಧೆಯಲ್ಲಿ 10 ಭಾಷೆಗಳಿರುತ್ತವೆ. ಈ ಸ್ಪರ್ಧೆಯಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು ಸಂಬಂಧಪಟ್ಟ ಭಾಷೆಯನ್ನು ಪ್ರಥಮ ಅಥವಾ ದ್ವಿತೀಯ ಅಥವಾ ತೃತೀಯ ಭಾಷೆಯನ್ನಾಗಿ ಅಭ್ಯಸಿಸುತ್ತಿರಬೇಕು. ಆದ್ದರಿಂದ ಇದರಲ್ಲಿ 7 ಭಾಷೆಗಳಿಗೆ ಮಾತ್ರ ಬಹುಮಾನದ ಮೊತ್ತ ಬಿಡುಗಡೆಗೊಳಿಸಿದೆ. ಕ್ರ.ಸಂ.(2)–ಧಾರ್ಮಿಕ ಪಠಣದಲ್ಲಿ ಎರಡು ಭಾಷೆಗಳಿರುತ್ತದೆ. ಆದ್ದರಿಂದ 20 ಸ್ಪರ್ಧೆಗಳಿಗೆ ಬಹುಮಾನದ ಮೊತ್ತ ಬಿಡುಗಡೆಗೊಳಿಸಿದೆ. (ಪ್ರತಿಯೊಂದು ಜಿಲ್ಲೆಯಲ್ಲಿ 10 ಭಾಷೆಗಳನ್ನು ಅಭ್ಯಸಿಸುವ ವಿದ್ಯಾರ್ಥಿಗಳು ಇರುವುದಿಲ್ಲ)

4) 8 ರಿಂದ 12 ತರಗತಿಯವರೆಗಿನ ಸಾಮೂಹಿಕ ವಿಭಾಗದ ಕ್ರ.ಸಂ.(1) ಮತ್ತು (3)ರ ಸ್ಪರ್ಧೆಗಳಲ್ಲಿ ಪ್ರತಿ ತಂಡದಲ್ಲಿ 6 ವಿದ್ಯಾರ್ಥಿಗಳು ಭಾಗವಹಿಸುವುದು ಹಾಗೂ ಕ್ರ.ಸಂ(2)ರ ಸ್ಪರ್ಧೆಯಲ್ಲಿ ಇಬ್ಬರು ವಿದ್ಯಾರ್ಥಿಗಳು ಭಾಗವಹಿಸುವುದು.

ಆಯುಕ್ತರು

ಶಾಲಾ ಶಿಕ್ಷಣ ಇಲಾಖೆ.

CamScanner

## ಅನುಬಂಧ-3

### ರಾಜ್ಯ ಹಂತದ ಪ್ರತಿಭಾ ಕಾರಂಜಿ ಅನುದಾನದ ವಿಂಗಡನೆ

| ಬಹುಮಾನದ ಶ್ರೇಣಿ | ವೈಯುಕ್ತಿಕ ವಿಭಾಗ | | | ಸಾಮೂಹಿಕ ವಿಭಾಗ | | | ರಾಜ್ಯ ಹಂತಕ್ಕೆ ನಿಗಧಿಪಡಿಸಿದ ಮೊತ್ತ |
|---|---|---|---|---|---|---|---|
| | ತರಗತಿ 08 ರಿಂದ 12 | | | ತರಗತಿ 08 ರಿಂದ 12 | | | |
| | ಮೊತ್ತ | ಸ್ಪರ್ಧೆಗಳ ಸಂಖ್ಯೆ | ಒಟ್ಟು ಮೊತ್ತ | ಮೊತ್ತ | ಸ್ಪರ್ಧೆಗಳ ಸಂಖ್ಯೆ | ಒಟ್ಟು ಮೊತ್ತ | |
| ಪ್ರಥಮ | 6,000 | | | 3000 | | 42,000 | |
| ದ್ವಿತೀಯ | 4,000 | | | 2000 | | 28,000 | |
| ತೃತೀಯ | 2,000 | | | 1000 | | 14,000 | |
| ಸಮಾಧಾನಕರ (1000*5) | 5,000 | | | 500 (500*14*2) | | 14,000 | |
| ಒಟ್ಟು | 17000 | 23 | 391,000 | 6000 | 14 | 98,000 | |
| ತೀರ್ಪುಗಾರರ ಸಂಭಾವನೆ | 500*3*23 | | 34,500 | 500*3*3 | | 4,500 | |
| ಆಯೋಜನಾ ವೆಚ್ಚ ಮತ್ತು ಪ್ರಮಾಣ ಪತ್ರ | | | | | | 1,369,800 | |
| ಪ್ರಯಾಣ ಭತ್ಯೆ (ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗೆ) | | | | | | 150,700 | |
| **ಒಟ್ಟು ಮೊತ್ತ** | | | 425,500 | | | 1,623,000 | 20,48,500 |

| | |
|---|---|
| **ಬಹುಮಾನಗಳ ಮೊತ್ತ** | ರೂ.489000/- |
| **ತೀರ್ಪುಗಾರರ ಸಂಭಾವನೆ** | ರೂ.39000/- |
| **ಆಯೋಜನಾ ವೆಚ್ಚ** | ರೂ.1369800/- |
| **ವಿದ್ಯಾರ್ಥಿ/ಶಿಕ್ಷಕರ ಪ್ರಯಾಣ ವೆಚ್ಚ** | ರೂ.150700/- |
| **ಒಟ್ಟು ಮೊತ್ತ** | ರೂ.2085242/ |

ಷರಾ 1) ಬಹುಮಾನವಾಗಿ ನಿಗಧಿಪಡಿಸಿರುವ ಮೊತ್ತವನ್ನು ವಿಜೇತ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ಜಮಾ ಮಾಡುವುದು

2) 8 ರಿಂದ 12 ತರಗತಿಯವರೆಗಿನ ಕ್ರ.ಸಂ.(1)- ಭಾಷಣ ಸ್ಪರ್ಧೆಯಲ್ಲಿ 10 ಭಾಷೆಗಳಿರುತ್ತವೆ. ಈ ಸ್ಪರ್ಧೆಯಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು ಸಂಬಂಧಪಟ್ಟ ಭಾಷೆಯನ್ನು ಪ್ರಥಮ ಅಥವಾ ದ್ವಿತೀಯ ಅಥವಾ ತೃತೀಯ ಭಾಷೆಯನ್ನಾಗಿ ಅಭ್ಯಸಿಸುತ್ತಿರಬೇಕು. ಆದ್ದರಿಂದ ಇದರಲ್ಲಿ 7 ಭಾಷೆಗಳಿಗೆ ಮಾತ್ರ ಬಹುಮಾನದ ಮೊತ್ತ ಬಿಡುಗಡೆಗೊಳಿಸಿದೆ. ಕ್ರ.ಸಂ.(2)-ಧಾರ್ಮಿಕ ಪಠಣದಲ್ಲಿ ಎರಡು ಭಾಷೆಗಳಿರುತ್ತದೆ. ಆದ್ದರಿಂದ 20 ಸ್ಪರ್ಧೆಗಳಿಗೆ ಬಹುಮಾನದ ಮೊತ್ತ ಬಿಡುಗಡೆಗೊಳಿಸಿದೆ. (ಪ್ರತಿಯೊಂದು ಜಿಲ್ಲೆಯಲ್ಲಿ 10 ಭಾಷೆಗಳನ್ನು ಅಭ್ಯಸಿಸುವ ವಿದ್ಯಾರ್ಥಿಗಳು ಇರುವುದಿಲ್ಲ)

3) 8 ರಿಂದ 12 ತರಗತಿಯವರೆಗಿನ ಸಾಮೂಹಿಕ ವಿಭಾಗದ ಕ್ರ.ಸಂ.(1) ಮತ್ತು (3)ರ ಸ್ಪರ್ಧೆಗಳಲ್ಲಿ ಪ್ರತಿ ತಂಡದಲ್ಲಿ 6 ವಿದ್ಯಾರ್ಥಿಗಳು ಭಾಗವಹಿಸುವುದು ಹಾಗೂ ಕ್ರ.ಸಂ(2)ರ ಸ್ಪರ್ಧೆಯಲ್ಲಿ ಇಬ್ಬರು ವಿದ್ಯಾರ್ಥಿಗಳು ಭಾಗವಹಿಸುವುದು.

ಆಯುಕ್ತರು
ಶಾಲಾ ಶಿಕ್ಷಣ ಇಲಾಖೆ.

CS CamScanner

# ಅನುಬಂಧ–4

## ಕ್ಲಸ್ಟರ್ ಹಂತದ ಪ್ರತಿಭಾ ಕಾರಂಜಿ ಅನುದಾನದ ವಿಂಗಡನೆ

| ಬಹುಮಾನದ ಶ್ರೇಣಿ | ವೈಯುಕ್ತಿಕ ವಿಭಾಗ | | | | | | | | | ಸಾಮೂಹಿಕ ವಿಭಾಗ | | | | |
|---|---|---|---|---|---|---|---|---|---|---|---|---|---|---|
| | ತರಗತಿ 01 ರಿಂದ 04 | | | ತರಗತಿ 05 ರಿಂದ 07 | | | ತರಗತಿ 08 ರಿಂದ 12 | | | ತರಗತಿ 08 ರಿಂದ 12 | | | ಪ್ರತಿ ಕ್ಲಸ್ಟರ್ ಹಂತಕ್ಕೆ ನೀಡುವ ಮೊತ್ತ | ರಾಜ್ಯದ ಕ್ಲಸ್ಟರ್ ಗಳಿಗೆ ತಗಲು ಮೊತ್ತ (6010*4096) |
| | ಮೊತ್ತ | ಸ್ಪರ್ಧೆಗಳ ಸಂಖ್ಯೆ | ಒಟ್ಟು ಮೊತ್ತ | ಮೊತ್ತ | ಸ್ಪರ್ಧೆಗಳ ಸಂಖ್ಯೆ | ಒಟ್ಟು ಮೊತ್ತ | ಮೊತ್ತ | ಸ್ಪರ್ಧೆಗಳ ಸಂಖ್ಯೆ | ಒಟ್ಟು ಮೊತ್ತ | ಮೊತ್ತ | ಸ್ಪರ್ಧೆಗಳ ಸಂಖ್ಯೆ | ಒಟ್ಟು ಮೊತ್ತ | | |
| ಪ್ರಥಮ | 40 | | | 40 | | | 50 | | | 50 | | 300 | | |
| ದ್ವಿತೀಯ | 30 | | | 30 | | | 35 | | | 40 | | 240 | | |
| ತೃತೀಯ | 20 | | | 20 | | | 25 | | | 20 | | 120 | | |
| ಒಟ್ಟು | 90 | 16 | 1,440 | 90 | 19 | 1,710 | 110 | 20 | 2,200 | 105 | 3 | 660 | | |
| ಒಟ್ಟು ಮೊತ್ತ | | | 1,440 | | | 1,710 | | | 2,200 | | | 660 | 6,000 | 2,46,12,000 |

ಷರಾ 1) ಬಹುಮಾನವಾಗಿ ನಿಗಧಿಪಡಿಸಿರುವ ಮೊತ್ತವನ್ನು ವಿಜೇತ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ಜಮಾ ಮಾಡುವುದು

2) ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ ಕಾರ್ಯಕ್ರಮದಲ್ಲಿ ಭಾಗವಹಿಸುವ ವಿದ್ಯಾರ್ಥಿಗಳ ಪ್ರಯಾಣ ಭತ್ಯೆಯನ್ನು ಶಾಲಾ ಸಂಚಿತ ನಿಧಿ/ಚಾಲ್ತಿ ನಿಧಿಯಿಂದ ಭರಿಸುವುದು

3) 1 ರಿಂದ 4 ತರಗತಿಯವರೆಗಿನ ಕ್ರಸಂ.(1)– ಕಂಠ ಪಾಠ ಸ್ಪರ್ಧೆಯಲ್ಲಿ 10 ಭಾಷೆಗಳಿರುತ್ತವೆ. ಈ ಸ್ಪರ್ಧೆಯಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು ಸಂಬಂಧಪಟ್ಟ ಭಾಷೆಯನ್ನು ಪ್ರಥಮ ಅಥವಾ ದ್ವಿತೀಯ ಅಥವಾ ತೃತೀಯ ಭಾಷೆಯನ್ನಾಗಿ ಅಭ್ಯಸಿಸುತ್ತಿರಬೇಕು. ಆದ್ದರಿಂದ ಇದರಲ್ಲಿ 6 ಭಾಷೆಗಳಿಗೆ ಮಾತ್ರ ಬಹುಮಾನದ ಮೊತ್ತ ಬಿಡುಗಡೆಗೊಳಿಸಿದೆ. ಕ್ರಸಂ.(2)–ಧಾರ್ಮಿಕ ಪಠಣದಲ್ಲಿ ಎರಡು ಭಾಷೆಗಳಿರುತ್ತದೆ. ಆದ್ದರಿಂದ 16 ಸ್ಪರ್ಧೆಗಳಿಗೆ ಬಹುಮಾನದ ಮೊತ್ತ ಬಿಡುಗಡೆಗೊಳಿಸಿದೆ. (ಪ್ರತಿಯೊಂದು ಕ್ಲಸ್ಟರ್‌ನಲ್ಲಿ 10 ಭಾಷೆಗಳನ್ನು ಅಭ್ಯಸಿಸುವ ವಿದ್ಯಾರ್ಥಿಗಳು ಇರುವುದಿಲ್ಲ)

4) 5 ರಿಂದ 7 ತರಗತಿಯವರೆಗಿನ ಕ್ರಸಂ.(1)– ಕಂಠ ಪಾಠ ಸ್ಪರ್ಧೆಯಲ್ಲಿ 10 ಭಾಷೆಗಳಿರುತ್ತವೆ. ಈ ಸ್ಪರ್ಧೆಯಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು ಸಂಬಂಧಪಟ್ಟ ಭಾಷೆಯನ್ನು ಪ್ರಥಮ ಅಥವಾ ದ್ವಿತೀಯ ಅಥವಾ ತೃತೀಯ ಭಾಷೆಯನ್ನಾಗಿ ಅಭ್ಯಸಿಸುತ್ತಿರಬೇಕು. ಆದ್ದರಿಂದ ಇದರಲ್ಲಿ 7 ಭಾಷೆಗಳಿಗೆ ಮಾತ್ರ ಬಹುಮಾನದ ಮೊತ್ತ ಬಿಡುಗಡೆಗೊಳಿಸಿದೆ. ಕ್ರಸಂ.(2)–ಧಾರ್ಮಿಕ ಪಠಣದಲ್ಲಿ ಎರಡು ಭಾಷೆಗಳಿರುತ್ತದೆ. ಆದ್ದರಿಂದ 19 ಸ್ಪರ್ಧೆಗಳಿಗೆ ಬಹುಮಾನದ ಮೊತ್ತ ಬಿಡುಗಡೆಗೊಳಿಸಿದೆ. (ಪ್ರತಿಯೊಂದು ಕ್ಲಸ್ಟರ್‌ನಲ್ಲಿ 10 ಭಾಷೆಗಳನ್ನು ಅಭ್ಯಸಿಸುವ ವಿದ್ಯಾರ್ಥಿಗಳು ಇರುವುದಿಲ್ಲ)

5) 8 ರಿಂದ 12 ತರಗತಿಯವರೆಗಿನ ಕ್ರಸಂ.(1)– ಭಾಷಣ ಸ್ಪರ್ಧೆಯಲ್ಲಿ 10 ಭಾಷೆಗಳಿರುತ್ತವೆ. ಈ ಸ್ಪರ್ಧೆಯಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು ಸಂಬಂಧಪಟ್ಟ ಭಾಷೆಯನ್ನು ಪ್ರಥಮ ಅಥವಾ ದ್ವಿತೀಯ ಅಥವಾ ತೃತೀಯ ಭಾಷೆಯನ್ನಾಗಿ ಅಭ್ಯಸಿಸುತ್ತಿರಬೇಕು. ಆದ್ದರಿಂದ ಇದರಲ್ಲಿ 7 ಭಾಷೆಗಳಿಗೆ ಮಾತ್ರ ಬಹುಮಾನದ ಮೊತ್ತ ಬಿಡುಗಡೆಗೊಳಿಸಿದೆ. ಕ್ರಸಂ.(2)–ಧಾರ್ಮಿಕ ಪಠಣದಲ್ಲಿ ಎರಡು ಭಾಷೆಗಳಿರುತ್ತದೆ. ಆದ್ದರಿಂದ 20 ಸ್ಪರ್ಧೆಗಳಿಗೆ ಬಹುಮಾನದ ಮೊತ್ತ ಬಿಡುಗಡೆಗೊಳಿಸಿದೆ. (ಪ್ರತಿಯೊಂದು ಕ್ಲಸ್ಟರ್‌ನಲ್ಲಿ 10 ಭಾಷೆಗಳನ್ನು ಅಭ್ಯಸಿಸುವ ವಿದ್ಯಾರ್ಥಿಗಳು ಇರುವುದಿಲ್ಲ)

6) 8 ರಿಂದ 12 ತರಗತಿಯವರೆಗಿನ ಸಾಮೂಹಿಕ ವಿಭಾಗದ ಕ್ರಸಂ.(1) ಮತ್ತು (3)ರ ಸ್ಪರ್ಧೆಗಳಲ್ಲಿ ಪ್ರತಿ ತಂಡದಲ್ಲಿ 6 ವಿದ್ಯಾರ್ಥಿಗಳು ಭಾಗವಹಿಸುವುದು ಹಾಗೂ ಕ್ರಸಂ(2)ರ ಸ್ಪರ್ಧೆಯಲ್ಲಿ ಇಬ್ಬರು ವಿದ್ಯಾರ್ಥಿಗಳು ಭಾಗವಹಿಸುವುದು.

ಆಯುಕ್ತರು
ಶಾಲಾ ಶಿಕ್ಷಣ ಇಲಾಖೆ.

CamScanner

CS CamScanner

ಕರ್ನಾಟಕ ಸರ್ಕಾರ

ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ, ಸಾ.ಶಿ.ಇಲಾಖೆ, ಆಯುಕ್ತರ ಕಛೇರಿ, ನೃಪತುಂಗರಸ್ತೆ, ಬೆಂಗಳೂರು-560001

**ವಿಷಯ: 2023-24ನೇ ಸಾಲಿನ ಪ್ರತಿಭಾ ಕಾರಂಜಿ ಕಾರ್ಯಕ್ರಮದ ಕ್ರಿಯಾ ಯೋಜನೆ**

| ಕ್ರ. ಸಂ. | ಹಂತ | ಅನುದಾನದವಿವರ | ಫಲಾನುಭವಿಗಳು ಹಾಗೂಇತರರು (ಅಂದಾಜು) | ಅವಧಿ | ಷರಾ |
|---|---|---|---|---|---|
| 1 | ರಾಜ್ಯ ಕಛೇರಿ | ---- | - | ಮೇ ಮತ್ತು ಜೂನ್-2023 | ಕ್ರಿಯಾ ಯೋಜನೆ ಸಿದ್ಧಪಡಿಸುವಿಕೆ, ಅನುದಾನ ವಿಂಗಡನೆ ಹಾಗೂ ಹಂಚಿಕೆ ಮತ್ತು ಸುತ್ತೋಲೆ ಹೊರಡಿಸುವುದು |
| 2 | ಶಾಲಾ ಹಂತ | ---- | ಕಿ.ಪ್ರಾ.ಶಾಲೆ +<br>ಹಿ.ಪ್ರಾ.ಶಾಲೆ, +<br>ಪ್ರೌ.ಶಾ &<br>ಸ.ಪ.ಪೂ.ಕಾ=20 | ಜುಲೈ-2023ರೊಳಗೆ | ಪ್ರತಿ ತರಗತಿಯಲ್ಲಿ ಉತ್ತಮ ನಿರ್ವಹಣೆ ತೋರುವ ವಿದ್ಯಾರ್ಥಿಗಳನ್ನು ಗುರುತಿಸಿ ಕ್ಲಸ್ಟರ್ ಹಂತಕ್ಕೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವುದು |
| 3 | ಕ್ಲಸ್ಟರ್ ಹಂತ | ಒಂದು ಕ್ಲಸ್ಟರ್ ಗೆ ರೂ.6000/- ಬಿಡುಗಡೆ (ಟಿ.ಬಿ.ಎಫ್ ನಿಂದ) | ವಿದ್ಯಾರ್ಥಿಗಳು-790<br>ತೀರ್ಪುಗಾರರು-186<br>ಶಿಕ್ಷಕರು - 20<br>ಒಟ್ಟು - 996 | ಆಗಸ್ಟ್-2023 ರೊಳಗೆ | ಅನುದಾನ ಬಿಡುಗಡೆಗೊಳಿಸುವುದು. ಕಾರ್ಯಕ್ರಮದ ಆಯೋಜನೆ, ಅನುಷ್ಠಾನ ಹಾಗೂ ಅನುಪಾಲನೆ |
| 4 | ತಾಲ್ಲೂಕು ಹಂತ | ಒಟ್ಟು ರೂ-18491000/-<br>(205 ತಾಲ್ಲೂಕು * ಪ್ರತಿ ತಾಲ್ಲೂಕಿಗೆ ರೂ.90,200/- ರಂತೆ ) | ವಿದ್ಯಾರ್ಥಿಗಳು-450<br>ತೀರ್ಪುಗಾರರು-186<br>ಶಿಕ್ಷಕರು/ಇತರೆ- 40<br>**ಒಟ್ಟು -676** | ಸೆಪ್ಟಂಬರ್ -2023ರೊಳಗೆ | ಅನುದಾನ ಬಿಡುಗಡೆಗೊಳಿಸುವುದು. ಕಾರ್ಯಕ್ರಮದ ಆಯೋಜನೆ, ಅನುಷ್ಠಾನ ಹಾಗೂ ಅನುಪಾಲನೆ |
| 5 | ಜಿಲ್ಲಾ ಹಂತ | ಒಟ್ಟು ರೂ-4602500/-<br>(35 ಜಿಲ್ಲೆ * ಪ್ರತಿ ಜಿಲ್ಲೆಗೆ ರೂ.131500/-)<br>ಟಿ.ಎ/ಡಿ.ಎ - 1435000/-<br>**ಒಟ್ಟು - 6037500/-** | ವಿದ್ಯಾರ್ಥಿಗಳು-300<br>ತೀರ್ಪುಗಾರರು-186<br>ಶಿಕ್ಷಕರು/ಇತರೆ- 40<br>**ಒಟ್ಟು - 526** | ನವೆಂಬರ್ -2023ರೊಳಗೆ | ಅನುದಾನ ಬಿಡುಗಡೆಗೊಳಿಸುವುದು. ಕಾರ್ಯಕ್ರಮದ ಆಯೋಜನೆ, ಅನುಷ್ಠಾನ ಹಾಗೂ ಅನುಪಾಲನೆ |
| 6 | ರಾಜ್ಯ ಹಂತ | ಬಹುಮಾನಗಳ ಮೊತ್ತ – ರೂ.489000/–<br>ತೀರ್ಪುಗಾರರ ಸಂಭಾವನೆ – ರೂ.39000/–<br>ಆಯೋಜನಾ ವೆಚ್ಚ – ರೂ..1369800/–<br>ವಿದ್ಯಾರ್ಥಿ/ಶಿಕ್ಷಕರ ಪ್ರಯಾಣ ವೆಚ್ಚ – ರೂ.150700/–<br>**ಒಟ್ಟು ಮೊತ್ತ – ರೂ.2048500/** | ವಿದ್ಯಾರ್ಥಿಗಳು-1295<br>ತೀರ್ಪುಗಾರರು- 186<br>ಶಿಕ್ಷಕರು/ಇತರೆ- 90<br>**ಒಟ್ಟು - 1571** | ಡಿಸಂಬರ್ -2023 ರೊಳಗೆ | ಅನುದಾನ ಬಿಡುಗಡೆಗೊಳಿಸುವುದು. ಕಾರ್ಯಕ್ರಮದ ಆಯೋಜನೆ, ಅನುಷ್ಠಾನ |
| 7 | ರಾಜ್ಯಕಛೇರಿ | ---- | - | ಜನವರಿ,,<br>ಫೆಬ್ರುವರಿ-2024<br>ಮಾರ್ಚ್-2024 | ಉಪಯೋಗಿತಾ ಪ್ರಮಾಣಪತ್ರ ಹಾಗೂ ವರದಿ ಸ್ವೀಕೃತಿ<br>ಕಾರ್ಯಕ್ರಮದ ಲೆಕ್ಕ ಚುಕ್ತಾಮಾಡುವುದು |

ಆಯುಕ್ತರು
ಶಾಲಾ ಶಿಕ್ಷಣ ಇಲಾಖೆ

CamScanner

CamScanner